OS 27/2022
PW-01

<u>ದಿನಾಂಕಃ 08-01-2026</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟಿ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ SVK ಮಾನ್ಯ ವಕೀಲರಿಂದಃ</u>**

ನನಗೆ ದಾವಾ ಆಸ್ತಿಗಳ ಸರ್ವೆ ನಂಬರ ಗೊತ್ತಿರುತ್ತವೆ. ಅವುಗಳೇಂದರೆ, ಸ.ನಂ.292 ಕ್ಷೇತ್ರ 10 ಎಕರೆ 10 ಗುಂಟೆ, ಸ.ನಂ.291 ಕ್ಷೇತ್ರ 08 ಎಕರೆ 31 ಗುಂಟೆ, ಸ.ನಂ.253 ಕ್ಷೇತ್ರ 18 ಗುಂಟೆ, ಸ.ನಂ.254 ಕ್ಷೇತ್ರ 13 ಗುಂಟೆ ಇರುತ್ತವೆ. ಹಾಗೂ ಒಂದು ಮನೆ ಇದ್ದು ಅದರಲ್ಲಿ 1 ನೇ ಪ್ರತಿವಾದಿಗೆ 10 ಕೋಣೆಗಳು ಹಾಗೂ 2 ನೇ ಪ್ರತಿವಾದಿಗೆ 6 ಕೋಣೆಗಳು ಬಂದಿರುತ್ತವೆ. 1 ನೇ ಪ್ರತಿವಾದಿಗೆ ಬಂದಿರುವ ಮನೆಯ ನಂಬರ 3 ಹಾಗೂ 2 ನೇ ಪ್ರತಿವಾದಿಗೆ ಬಂದಿರುವ ಮನೆಯ ನಂಬರ 2 ಆಗಿರುತ್ತವೆ.

2. ಸ.ನಂ.291 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಜಂಟಿ ಸ್ವಾಧೀನಾನುಭವದಲ್ಲಿರುತ್ತಾರೆ. ಸ.ನಂ.992 ರಲ್ಲಿ 1 ನೇ ಪ್ರತಿವಾದಿಗೆ 4 ಎಕರೆ ಚಿಲ್ಲರೆ ಗುಂಟೆ ಹಾಗೂ 2 ನೇ ಪ್ರತಿವಾದಿಗೆ 6 ಎಕರೆ ಚಿಲ್ಲರೆ ಗುಂಟೆ ಬಂದಿರುತ್ತವೆ. ಸದರಿ 18 ಗುಂಟೆ ಜಮೀನು ಇನ್ನು ನನ್ನ ತಂದೆಯವರ ಹೆಸರಿನಲ್ಲಿರುತ್ತದೆ. ಸ.ನಂ.254 ಕೂಡಾ ಇನ್ನು ನನ್ನ ತಂದೆಯವರ ಹೆಸರಿನಲ್ಲಿರುತ್ತದೆ. ನಾನು ನನ್ನ ತಂದೆ ಹಾಗೂ 1 ಮತ್ತು 2 ನೇ ಪ್ರತಿವಾದಿಯ ಹೆಸರಿನಲ್ಲಿರುವ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ಸದರಿ ಪಹಣಿ ಪತ್ರಿಕೆಗಳನ್ನು ನಾನು ಸುಮಾರು 5-6 ವರ್ಷಗಳ ಹಿಂದೆ ನೋಡಿರುತ್ತೇನೆ. ಸದರಿ 5-6 ವರ್ಷಗಳ ಹಿಂದಿನ ಪಹಣಿಗಳನ್ನೇ ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ.

3. ಸಾಕ್ಷಿಗೆ ಈಗ 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುವ ಮನೆಯ ಸಂಖ್ಯೆ ಏನು ಇರುತ್ತದೆ ಎಂದು ಕೇಳಿದ್ದಕ್ಕೆ ಸಾಕ್ಷಿ ಸಂಬಂದಪಟ್ಟ ಅಧಿಕಾರಿಗಳು ಸದರಿ ಮನೆ ನೊಂದಣಿ ಆಗದ ಕಾರಣ ನಂಬರ ಕೊಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ಎರಡು ಎತ್ತುಗಳ ಸಹಾಯದೊಂದಿಗೆ ಜಮೀನುಗಳನ್ನು ಉಳಿಮೆ ಮಾಡಿಕೊಂಡಿದ್ದರು. ನನ್ನ ತಂದೆಯವರು ತೀರಿಕೊಂಡು ಈಗ 25-26 ವರ್ಷಗಳಾಗಿರುತ್ತವೆ. ನಮ್ಮ ತಂದೆಯವರು ತಮ್ಮ ಪಿತ್ರಾರ್ಜಿತ ಸ್ವತ್ತುಗಳಿಂದ ಬಂದತಹ ಆದಾಯದಿಂದ ಹಾಗೂ ತಮ್ಮ ಆದಾಯದ ಮೂಲಗಳಿಗಂದ ಸ್ಥಿತಿವಂತರಾಗಿದ್ದರು ಎಂದರೆ ಸರಿ. ನಮ್ಮ ತಂದೆಯವರ ಕಾಲದಲ್ಲಿ ನಮ್ಮ ಮನೆಯಲ್ಲಿ ಎರಡು ಎತ್ತುಗಳು, ಒಂದು ಎಮ್ಮೆ ಹಾಗೂ ಒಂದು ಆಕಳು ಇದ್ದವು.

4. ಪಹಣಿಗಳಲ್ಲಿ 1 ಮತ್ತು 2 ನೇ ಪ್ರತಿವಾದಿಯ ಹೆಸರುಗಳು ಸುಮಾರು 28 ವರ್ಷಗಳಿಂದ ಬರುತ್ತಿವೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ತಮ್ಮ ತಮ್ಮ ಪಾಲಿಗೆ ಬಂದತಹ ಜಮೀನುಗಳಲ್ಲಿ ಇಲ್ಲಿವರೆಗೆ ಸ್ವಾಧೀನಾನುಭವದಲ್ಲಿದ್ದು ಅವುಗಳ ಉಳಿಮೆಯನ್ನು ಮಾಡುತ್ತಿದದಾರೆ ಎಂದರೆ ಸರಿ. ಕಳೆದ 28 ವರ್ಷಗಳ ಹಿಂದೆ 1 ಮತ್ತು 2 ನೇ ಪ್ರತಿವಾದಿಗಳು ವಿಭಾಗವಾಗಿರುತ್ತಾರೆ ಎಂದರೆ ಸರಿ.ಇವತ್ತಿಗೆ ನಮ್ಮ ತಾಯಿಯವರು ತೀರಿಕೊಂಡು 17 ವರ್ಷಗಳಾಗಿರುತ್ತವೆ ಎಂದರೆ ಸರಿ. ಸದರಿ 28 ವರ್ಷಗಳ ಹಿಂದೆ 1 ಮತ್ತು 2 ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡಾಗ ಅದರಲ್ಲಿ ನನಗೆ 15 ತೊಲೆ ಬಂಗಾರ ಹಾಗೂ ಒಂದು ಆಕಳನ್ನು ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ಪಾಲು ಆಗುವ ಸಂದರ್ಭದಲ್ಲಿ 3 ರಿಂದ 10 ನೇ ಪ್ರತಿವಾದಿಗಳ ತಾಯಂದಿರಿಗೆ ಕುಡಾ 15 ತೊಲೆ ಬಂಗಾರ ಹಾಗೂ ಒಂದು ಆಕಳನ್ನು ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಸನ್ 1994 ರಲ್ಲಿ ಯುಗಾದಿಯ ದಿನ ಸದರಿ ವಿಭಾಗವಾಗಿದ್ದು ನಮ್ಮಗಳಿಗೆ ಭಾಗವನ್ನು ಶ್ರೀ ಕಿಶಾನ್ ರಾವ ಕುಲ್ಕರ್ಣಿ ಹಾಗೂ ಶ್ರೀ

ಸಿದ್ದಯ್ಯಸ್ವಾಮಿ ಹಿರೇಮಠ ಇವರುಗಳ ಸಮಕ್ಷಮ ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಶ್ರೀ ಕಿಶಾನ್ ರಾವ ಕುಲ್ಕರ್ಣಿ ಇವರು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿ ಶ್ರೀ ಸಿದ್ದಯ್ಯಸ್ವಾಮಿ ಹಿರೇಮಠ ಇವರು ಕೂಡಾ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಾನು ಸದರಿ ಭಾಗವನ್ನು ಪಡೆದುಕೊಂಡಿದ್ದರೂ ಕೂಡಾ ನನ್ನ ತಮ್ಮಂದಿರೆಗೆ ತೊಂದರೆ ಕೊಡಲು ಪ್ರಸ್ತುತ ಸುಳ್ಳಾದ ದಾವೆಯನ್ನು ಸಲ್ಲಿಸಿ ಅದರ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.